ಕರ್ನಾಟಕ ಸರ್ಕಾರ

**ಅಕ್ಟೋಬರ್ 31, 2017**

# ಮುಖ್ಯಮಂತ್ರಿಯವರಿಂದ ಎರಡು ಮೊಬೈಲ್ ಆ್ಯಪ್‌ಗಳ ಲೋಕಾರ್ಪಣೆ : ಮುಖ್ಯಮಂತ್ರಿಯವರೊಡನೆ ಸಂಪರ್ಕ ಸಾಧಿಸಲು ದಿ ಸಿಟಿಜನ್ ಕನೆಕ್ಟ್ ಆ್ಯಪ್ ಹಾಗೂ ರೈತರ ಬೆಳೆ ಸಮೀಕ್ಷೆಗೆ ಫಾರ್ಮರ್ಸ್ ಕ್ರಾಪ್ ಸರ್ವೇ ಆ್ಯಪ್

**ಬೆಂಗಳೂರು, ಅಕ್ಟೋಬರ್ 31:**

ಮುಖ್ಯಮಂತ್ರಿಯವರೊಡನೆ ನಾಗರೀಕರು ಸಂಪರ್ಕ ಸಾಧಿಸಬಹುದಾದ **ದಿ ಸಿಟಿಜನ್ ಕನೆಕ್ಟ್ ಆ್ಯಪ್ ಎಂಬ ಹೆಸರಿನ ಜನ ಸಂಪರ್ಕ** ಮೊಬೈಲ್ ಆ್ಯಪ್ ಹಾಗೂ **ಫಾರ್ಮರ್ಸ್ ಕ್ರಾಪ್ ಸರ್ವೇ ಆ್ಯಪ್ ಎಂಬ ಹೆಸರಿನ** ರೈತರ ಬೆಳೆ ಸಮೀಕ್ಷೆಗೆ ಪೂರಕವಾದ ಮೊಬೈಲ್ ಆ್ಯಪ್ ಹೀಗೆ ಎರಡು ಪ್ರಮುಖ ಆ್ಯಪ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮಂಗಳವಾರ ಲೋಕಾರ್ಪಣೆ ಮಾಡಿದರು.

ಇದು ಡಿಜಿಟಲ್ ಯುಗ. ಪ್ರತಿಯೊಬ್ಬರ ಕಿಸೆಯಲ್ಲೂ ಮೊಬೈಲ್ ಎಂಬ ಸಂಪರ್ಕ ಸಾಧನ ಇದೆ. ಮೊಬೈಲ್ ಕೇವಲ ಸಂಭಾಷಣೆಯ ವಿನಿಮಯ ಮಾಡಿಕೊಳ್ಳುವ ಸಾಧನವಾಗಿ ಉಳಿದಿಲ್ಲ. ಬಹು ಉಪಯೋಗಿ ವೇದಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಮೊಬೈಲ್ ತಂತ್ರಜ್ಞಾನವನ್ನು ಬಳಸಿ ಸರ್ಕಾರದ ವಿವಿಧ ಯೋಜನೆಗಳ ಕುರಿತ ಸಮಗ್ರ ಮಾಹಿತಿಯನ್ನು ಸಾರ್ವಜನಿಕರಿಗೆ ಸಕಾಲದಲ್ಲಿ ತಲುಪಿಸಿ, ಸರ್ಕಾರದ ಯೋಜನೆಗಳು ಹಾಗೂ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಳ್ಳಲು ಅನುವಾಗುವಂತೆ ದಿ ಸಿಟಿಜನ್ ಕನೆಕ್ಟ್ **ಆ್ಯಪ್** ರೂಪಿಸಲಾಗಿದೆ.

ಅದೇ ರೀತಿ, ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ರೈತರಿಗೆ ಸರ್ಕಾರದ ಸೌಲಭ್ಯ ಹಾಗೂ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ಕ್ಷಿಪ್ರವಾಗಿ ದೊರಕಿಸಿಕೊಡಲು **ಫಾರ್ಮರ್ಸ್ ಕ್ರಾಪ್ ಸರ್ವೇ ಆ್ಯಪ್** ವಿನ್ಯಾಸಗೊಳಿಸಲಾಗಿದೆ ಎಂದು ಸಿದ್ದರಾಮಯ್ಯ ಅವರು ಹೇಳಿದರು.

**ಸಿಟಿಜನ್ ಕನೆಕ್ಟ್ ಆ್ಯಪ್ :**

ಈ ಮುನ್ನ **ಸಿಟಿಜನ್ ಕನೆಕ್ಟ್ ಆ್ಯಪ್** ನ ವೈಶಿಷ್ಟ್ಯತೆಗಳ ವಿವರಿಸಿದ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎಲ್. ಕೆ. ಅತೀಕ್ ಅವರು ಈ ಆ್ಯಪ್ ಮೂಲಕ ಸರ್ಕಾರದ ವಿವಿಧ ಯೋಜನೆಗಳು ಮತ್ತು ಸಾಧನೆಗಳ ಮಾಹಿತಿಯ ವಿವರಗಳನ್ನು ತಿಳಿದುಕೊಳ್ಳಬಹುದು. ಅಲ್ಲದೆ, ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ದಾಖಲಿಸಿ ಪರಿಹಾರವನ್ನು ಪಡೆದುಕೊಳ್ಳಬಹುದು. ಅಂತೆಯೇ, ಮುಖ್ಯಮಂತ್ರಿಯವರು ನಡೆದು ಬಂದ ದಾರಿ ಹಾಗೂ ನವ ಕರ್ನಾಟಕ ನಿರ್ಮಾಣಕ್ಕೆ ಮುಖ್ಯಮಂತ್ರಿಯವರ ಮುನ್ನೋಟ ಏನು ? ಎಂಬುದನ್ನು ನಾಗರೀಕರು ತಿಳಿಯಬಹುದು ಎಂದರು.

ಅದೇ ರೀತಿ ನಾಗರಿಕ ಸ್ನೇಹಿ ಎನಿಸಿರುವ **ಸಿಟಿಜನ್ ಕನೆಕ್ಟ್ ಆ್ಯಪ್** ಬಳಕೆದಾರರಿಗೆ ಮುಖ್ಯಮಂತ್ರಿಯವರ ಕಚೇರಿಯ ತಾಜಾ ಸುದ್ದಿಗಳನ್ನು ನೀಡುತ್ತದೆ. ಮುಖ್ಯಮಂತ್ರಿಯವರ ಬ್ಲಾಗ್, ಭಾಷಣಗಳು ಹಾಗೂ ಸಂದರ್ಶನಗಳಿಗೆ ಸಂಪರ್ಕ ಕಲ್ಪಿಸುತ್ತದೆ. ನಾಗರೀಕರು ಮುಖ್ಯಮಂತ್ರಿಯವರ ಕಚೇರಿಗೆ ನೇರವಾಗಿ ಇಲಾಖಾವಾರು ಸಮಸ್ಯೆಗಳ ಕುರಿತು ಅಭಿಪ್ರಾಯಗಳನ್ನು ತಿಳಿಸಬಹುದು. ಅಂತೆಯೇ, ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿ ದಾಖಲಿಸಬಹುದು.

ವಿವಿಧ ಯೋಜನೆಗಳನ್ನು ರೂಪಿಸುವುದು – ಅವುಗಳ ಪರಿಣಾಮಕಾರಿ ಅನುಷ್ಠಾನಗೊಳಿಸುವುದು ಈ **ಆ್ಯಪ್**ನ ಮೂಲ ಉದ್ದೇಶವಾಗಿದೆ. ಅಲ್ಲದೆ, ಜನರೊಂದಿಗೆ ಮುಖ್ಯಮಂತ್ರಿಗಳು ನೇರವಾಗಿ ಸಂವಾದ ನಡೆಸಲು ಹಾಗೂ ಈ ಯೋಜನೆಗಳಲ್ಲಿ ಮತ್ತು ಆಡಳಿತ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಳ್ಳಲು ಈ **ಆ್ಯಪ್** ನಿಂದ ಮತ್ತಷ್ಟು ಉತ್ತೇಜನ ದೊರೆಯಲಿದೆ. ನವ ಕರ್ನಾಟಕ ನಿರ್ಮಾಣದ ದೃಷ್ಟಿಕೋನ ಹೊತ್ತ ಮುಖ್ಯಮಂತ್ರಿಯವರ ಕನಸು ಸಾಕಾರಗೊಳಿಸಲಿರುವ ಈ ಈ **ಆ್ಯಪ್** ನಾಗರೀಕರಿಗೆ ಒಂದೆಡೆಯೇ ಎಲ್ಲಾ ಪರಿಹಾರ ಒದಗಿಸುವ ಅತ್ಯುತ್ತಮ ವೇದಿಕೆಯಾಗಿದೆ.

ಮುಖ್ಯಮಂತ್ರಿಯವರ ಕಚೇರಿಯಿಂದ ತಾಜಾ ಸುದ್ದಿ ಸ್ವೀಕರಿಸುವುದು ಮಾತ್ರವಲ್ಲ, ಕರ್ನಾಟಕವನ್ನು ಪರಿವರ್ತಿಸುವ ಮುಖ್ಯಮಂತ್ರಿಯವರ ಕಾರ್ಯಕ್ರಮಗಳನ್ನು ಸರಳವಾಗಿ ಮತ್ತು ಸಮಗ್ರವಾಗಿ ಚಿತ್ರಿಸಲಿರುವ ಈ ಈ **ಆ್ಯಪ್** ನಾಗರೀಕರನ್ನು ಸಬಲೀಕರಣಗೊಳಿಸಿ ಸಮಾಜವನ್ನು ಸಕಾರಾತ್ಮಕ ಪಥದಲ್ಲಿ ಕೊಂಡ್ಯೊಯಲಿದೆ.

ಸರ್ಕಾರದ ಎಲ್ಲಾ ಇಲಾಖೆಗಳ ಬಗ್ಗೆಯೂ ನಾಗರೀಕರು ತಮ್ಮ ಅಭಿಪ್ರಾಯಗಳನ್ನು, ಸಲಹೆಗಳನ್ನು ನೀಡಬಹುದಾಗಿದೆ. ವ್ಯಕ್ತಿಚಿತ್ರ ವಿಭಾಗದಲ್ಲಿ ಮುಖ್ಯಮಂತ್ರಿಯವರ ವಿಶಿಷ್ಠ ದೃಷ್ಟಿಯನ್ನು ಕಾಣಬಹುದಾಗಿದೆ. ಮುಖ್ಯಮಂತ್ರಿಯವರ ದಿನಚರಿ, ಆಡಳಿತದ ಕ್ರಮಗಳು ಸಾಧನೆಗಳು ಹಾಗೂ ಅವುಗಳು ರಾಜ್ಯದ ಜನರ ಜೀವನವನ್ನು ಹೇಗೆ ಉತ್ತಮಪಡಿಸುತ್ತಿವೆ ಎಂಬುದರ ಮಾಹಿತಿಯನ್ನು ಪಡೆಯಬಹುದಾಗಿದೆ.

ಈ **ಆ್ಯಪ್**ನಲ್ಲಿ ಮುಖ್ಯಮಂತ್ರಿಯವರ ಕಾರ್ಯಕ್ರಮಗಳ ಸಂಪೂರ್ಣ ವಿವರಗಳನ್ನು ಪಡೆಯಬಹುದು. ಮುಖ್ಯಮಂತ್ರಿಯವರ ಸಾಮಾಜಿಕ ಜಾಲ ತಾಣಗಳೊಂದಿಗೆ ಸಂಪರ್ಕ ಸಾಧಿಸಬಹುದು. ಮುಖ್ಯಮಂತ್ರಿಯವರ ಕುರಿತು ವಿವಿಧ ವೇದಿಕೆಗಳಲ್ಲಿ ಮಾಧ್ಯಮಗಳಲ್ಲಿ ವ್ಯಕ್ತವಾಗುವ ವಿಚಾರಗಳನ್ನು ಒಂದೆಡೆಯೇ ತಿಳಿಯಬಹುದು. ಇಂಗ್ಲೀಷ್ ಮತ್ತು ಕನ್ನಡ ಭಾಷೆಯಲ್ಲಿ ಮಾಹಿತಿ ವಿನಿಮಯಕ್ಕೆ ಅವಕಾಶವಿದೆ ಎಂದು ಅತೀಕ್ ಅವರು ಮಾಹಿತಿ ನೀಡಿದರು.

**ಫಾರ್ಮರ್ಸ್ ಕ್ರಾಪ್ ಸರ್ವೆ ಆ್ಯಪ್ :**

ಕೃಷಿ ಸಚಿವ ಕೃಷ್ಣ ಬೈರೇಗೌಡ ಅವರು ಮಾತನಾಡಿ ರಾಜ್ಯದ 2.7 ಕೋಟಿ ಹಿಡುವಳಿಗಳ ಬಗ್ಗೆ ಕಂದಾಯ ಇಲಾಖೆಯಲ್ಲಾಗಲೀ ಅಥವಾ ಕೃಷಿ ಇಲಾಖೆಯಲ್ಲಾಗಲೀ ಯಾವುದೇ ನಿಖರ ದಾಖಲೆಗಳಿಲ್ಲ. ಪ್ರಕೃತಿ ವಿಕೋಪ ಸಂದರ್ಭದಲ್ಲಿ ಪರಿಹಾರ ಒದಗಿಸಬೇಕಾದರೆ ಮುಂಗಾರು ಹಾಗೂ ಹಿಂಗಾರು ಋತುಗಳಲ್ಲಿ ಮಾಡಿದ ಬಿತ್ತನೆ, ಬೆಳೆದ ಬೆಳೆ ಹೀಗೆ ಎಲ್ಲದರ ಪೂರ್ವ ಮಾಹಿತಿ ಸರ್ಕಾರದಲ್ಲಿ ಇರಬೇಕಾಗುತ್ತದೆ. ರಾಜ್ಯದ ಪ್ರತಿ ಜಮೀನಿಗೆ ಭೇಟಿ ನೀಡಿ ಬೆಳೆ ಸಮೀಕ್ಷೆ ನಡೆಸುವ ಕಾರ್ಯಕ್ರಮವನ್ನು ಸರ್ಕಾರವು ಈಗಾಗಲೇ ಹಮ್ಮಿಕೊಂಡಿದೆ. ಇದಕ್ಕಾಗಿ ಈಗಾಗಲೇ ಕಂದಾಯ, ಕೃಷಿ ಹಾಗೂ ತೋಟಗಾರಿಕಾ ಇಲಾಖೆಗಳ 15,000 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಜಿ ಪಿ ಎಸ್ ( ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ ) ಕೋ–ಆರ್ಡಿನೇಟ್‌ಗಳೊಂದಿಗೆ ಜಮೀನಿನಲ್ಲಿ ಬೆಳೆದ ಬೆಳೆಗಳ ಅಧಿಕಾರಿಗಳು ವಿವರವನ್ನು ಸಂಗ್ರಹಿಸುತ್ತಾರೆ. ಅಲ್ಲದೆ, ಭೂ–ಮಾಲೀಕರ ಆಧಾರ್ ವಿವರಗಳನ್ನು ಕೂಡಾ ಪಡೆಯುತ್ತಾರೆ.

**ರೈತರೂ ಕೂಡಾ ಆ್ಯಪ್ ಮೂಲಕ ಮಾಹಿತಿ ನೀಡಬಹುದು !**

ಬೃಹತ್ ಪ್ರಮಾಣದ ಈ ದತ್ತಾಂಶ ಸಂಗ್ರಹಣಾ ಕಾರ್ಯಕ್ಕೆ ಮತ್ತಷ್ಟು ವೇಗ ಕಲ್ಪಿಸಲು ಹಾಗೂ ಕಾಲಮಿತಿಯೊಳಗೆ ಪೂರ್ಣಗೊಳಿಸಲು ರೈತರ ಬೆಳೆ ಸಮೀಕ್ಷೆಯ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಇದು ಸಾಮಾನ್ಯವಾಗಿ ಬಳಸುವ ಬೆಳೆ ಸಮೀಕ್ಷೆಯ ಮೊಬೈಲ್ ಆ್ಯಪ್‌ನ ಸಂಕ್ಷಿಪ್ತ ರೂಪ. ಕೇವಲ ಅಧಿಕಾರಿ ಮತ್ತು ಸಿಬ್ಬಂದಿ ಮಾತ್ರವಲ್ಲ ರೈತರೂ ಕೂಡಾ ಈ ಆ್ಯಪ್ ಮೂಲಕ ತಮ್ಮ ಬೆಳೆಗಳ ಕುರಿತು ಮಾಹಿತಿ ಒದಗಿಸಬಹುದಾಗಿದೆ.

ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಮಾಹಿತಿಯು ರೈತರಿಗೆ ಕನಿಷ್ಠ ಬೆಂಬಲ ಬೆಲೆ ಒದಗಿಸಲು ಹಾಗೂ ಸೌಲಭ್ಯಗಳನ್ನು ವಿತರಿಸಲು ಸರ್ಕಾರಕ್ಕೆ ನೆರವಾಗಲಿದೆ. ಸೌಲಭ್ಯ ಪಡೆದ ರೈತರಿಗೆ ಅವರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲು ಅವಕಾಶವಿದೆ. ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿಯಲ್ಲಿ ತೊಡಗಿದ ಎಲ್ಲಾ ರೈತರನ್ನೂ ಈ ವ್ಯಾಪ್ತಿಗೆ ಒಳಪಡಿಸಲು ಬೆಳೆ ನಷ್ಟ ಹಾಗೂ ಮಾರುಕಟ್ಟೆಯಲ್ಲಿ ಬೆಲೆ ಕುಸಿತದ ಸಂದರ್ಭದಲ್ಲಿ ಸಂತ್ರಸ್ತ ಫಲಾನುಭವಿಗಳ ಖಾತೆಗೆ ನೇರ ಹಣ ವರ್ಗಾವಣೆಗೆ ಅನುಕೂಲವಾಗುತ್ತದೆ.

ಅತೀವೃಷ್ಠಿ ( ನೆರೆ ) ಅಥವಾ ಅನಾವೃಷ್ಠಿ ( ಬರ ) ಯಂತಹ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಪರಿಹಾರ ಒದಗಿಸಲು ಹಾಗೂ ಈ ಪರಿಹಾರದ ಮೊತ್ತವನ್ನು ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲು ಸಾಧ್ಯವಾಗುತ್ತದೆ.

ರೈತರು ಬೆಳೆ ವಿಮಾ ಯೋಜನೆಗಳಿಗೆ ನೋಂದಾಯಿಸಲು ನೆರವಾಗುತ್ತದೆ. ಈ ಬೆಳೆಗಳನ್ನು **ಆರ್ ಟಿ** ಸಿ ( ರೆಕಾರ್ಡ್ ಆಫ್ ರೈಟ್ಸ್, ಟೆನೆನ್ಸಿ ಅಂಡ್ ಕ್ರಾಪ್ಸ್ ) ಯಲ್ಲಿ ದಾಖಲಿಸುವುದರಿಂದ ರೈತರು ಬೆಳೆ ಸಾಲವನ್ನು ಸುಲಭವಾಗಿ ಪಡೆಯಲು ಅನುಕೂಲವಾಗುತ್ತದೆ.

ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಯ ಮಾಹಿತಿಯನ್ನು ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಮೂಲಕ ಸ್ವತಃ ತಾವೇ ಅಥವಾ ಬೇರೆಯವರ ನೆರವಿನಿಂದ ಅಪ್‌ಲೋಡ್ ಮಾಡಬಹುದು ಎಂದು ಕೃಷ್ಣ ಭೈರೇಗೌಡ ಅವರು ವಿವರಿಸಿದರು.

ಈ ಆ್ಯಪ್ ಡೌನ್‌ಲೋಡ್ ಮಾಡುವಾಗ ಹಾಗೂ ಬೆಳೆಯ ಮಾಹಿತಿ ನೀಡುವ ಸಂದರ್ಭಗಳನ್ನು ಹೊರತುಪಡಿಸಿ, ಇಂಟರ್‌ನೆಟ್‌ನ ಅಗತ್ಯವಿಲ್ಲ. ರೈತರ ಜಮೀನಿನ ನಕ್ಷೆಯನ್ನು ಸರ್ವೇ ನಂಬರಿಗೆ ಅನುಗುಣವಾಗಿ ಒದಗಿಸುತ್ತದೆ. ರೈತರು ಒಂದು ಅಥವಾ ಮಿಶ್ರ ಬೆಳೆಯ ಪ್ರಮಾಣ ಹಾಗೂ ಚಿತ್ರಗಳೊಂದಿಗೆ ಬೆಳೆ ವಿವರಗಳನ್ನು ಒದಗಿಸಬಹುದು.

ಅಲ್ಲದೆ, ರೈತರ ಹೆಸರು ಮತ್ತು ಅವರ ಜಮೀನಿನ ಪ್ರಮಾಣವನ್ನು ಅಳೆಯಲು ಭೂಮಿ ತಂತ್ರಾಂಶದೊಂದಿಗೆ ಜೋಡಣೆಯಾಗಿದೆ. ರೈತರಿಗೆ ಲಭ್ಯವಿರುವ ಜಮೀನಿನಲ್ಲಿ ಪ್ರತಿ ಬೆಳೆಗೆ ಜಿಯೊ ಫೆನ್ಸಿಂಗ್ ಮಾಡಲು ಅವಕಾಶವಿದೆ.

ಜಮೀನಿನ ಮಾಹಿತಿಯನ್ನು ಆಧಾರ್‌ಗೆ ಜೋಡಣೆ ಮಾಡುವುದರಿಂದ 'ಭೂಮಿ' ಮತ್ತು ಸರ್ಕಾರದ ಇತರ ಯೋಜನೆಗಳ ಸೇವೆಗಳನ್ನು ಪಡೆಯಲು ಅನುಕೂಲವಾಗುತ್ತದೆ. ರಾಷ್ಟ್ರದಲ್ಲೇ ಬೆಳೆ ಪರಿಹಾರ ವಿತರಿಸಲು ಅಂಕಿತ ವೇದಿಕೆ ( ಡಿಜಿಟಲ್ ಪ್ಲಾಟ್‌ಫಾರಂ ) ಯನ್ನು ಸಮರ್ಥವಾಗಿ ಬಳಸಿಕೊಂಡ ರಾಜ್ಯ ನಮ್ಮ ಕರ್ನಾಟಕ. ಈ ವೇದಿಕೆಯ ಮೂಲಕ ಫಲಾನುಭವಿ 25 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ನೇರ ಹಣ ವರ್ಗಾವಣೆಯಾಗಿದೆ. ಅಲ್ಲದೆ, ಇಡೀ ದೇಶಕ್ಕೇ ಮಾದರಿಯಾದ ಆ್ಯಪ್ ವಿನ್ಯಾಸಗೊಳಿಸಿರುವ ಪ್ರಪ್ರಥಮ ಹಾಗೂ ಏಕೈಕ ರಾಜ್ಯ ನಮ್ಮ ಕರ್ನಾಟಕ ಎಂದು ಕೃಷ್ಣ ಬೈರೇಗೌಡ ಅವರು ಪ್ರಕಟಿಸಿದರು.

ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಕೆ ಜೆ ಜಾರ್ಜ್, ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ. ಬಿ. ಜಯಚಂದ್ರ, ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಕೆ. ರತ್ನಪ್ರಭ, ಟಿ. ಎಂ. ವಿಜಯಭಾಸ್ಕರ್, ರಾಜೀವ್ ಚಾವ್ಲ, ಮಹೇಂದ್ರ ಜೈನ್ ಹಾಗೂ ಅಜಯ್ ಸೇಠ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಪಿ. ಮಣಿವಣ್ಣನ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಡಾ ಪಿ. ಎಸ್. ಹರ್ಷ ಅವರೂ ಸೇರಿದಂತೆ ಹಿರಿಯ ಅಧಿಕಾರಿಗಳು ಈ ಸಮಾರಂಭದಲ್ಲಿ ಹಾಜರಿದ್ದರು.

************

**ಡಿ ಪಿ ಎಂ**